ಡೈರಿಯ ಅಧೀನದಲ್ಲಿರುವ ಶ್ರೀರಾಮಪುರದಲ್ಲಿರುವ ಬಲ್ಕ್ ವೆಂಡಿಂಗ್ ಬೂತ್ ಸಂಖ್ಯೆ. 318ರಲ್ಲಿ ಪ್ರಾರಂಭದಿಂದ ಇಲ್ಲಿಯವರೆಗೆ 6 ಕಲಬೆರಕೆ ಹಾಗೂ 138 ಬಾರಿ ಚೆಕ್ ಬೌನ್ಸ್ ಪ್ರಕರಣಗಳು ಆಗಿರುತ್ತವೆ. ಈ ಹಿಂದೆ ಕಲಬೆರಕೆ ಮತ್ತು ಚೆಕ್ ಬೌನ್ಸ್ ಪ್ರಕರಣಗಳು ಆದಲ್ಲಿ ಏಜೆನ್ಸಿಗಳಿಗೆ ಎಚ್ಚರಿಕೆ ನೀಡಲಾಗುತ್ತಿತ್ತು. ಚೆಕ್ ಬೌನ್ಸ್ ಪ್ರಕರಣಗಳಿಗೆ ಪ್ರತಿ ಬಾರಿಯೂ ರೂ. 100ದಂಡ ವಿಧಸಲಾಗುತ್ತಿತ್ತು. ಈ ಪ್ರಕರಣಗಳ ಸಂಖ್ಯೆ ಜಾಸ್ತಿಯಾದ್ದರಿಂದ ಇದನ್ನು ತಡೆಗಟ್ಟಲು ದಿನಾಂಕ 21–10–92ರಂದು ನಡೆದ ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಕಲಬರಕೆ ಮಾಡಿದಂತಹ ಏಜೆನ್ಸಿಗಳಿಗೆ ಮೊದಲನೇ ಬಾರಿಗೆ ರೂ. 2000 ದಂಡ ವಿಧಿಸುವುದು ಹಾಗೂ ಎರಡನೇ ಬಾರಿ ಕಲಬೆರಕೆ ಕಂಡು ಬಂದಲ್ಲಿ ಏಜೆನ್ಸಿ ರದ್ದುಪಡಿಸಲಾಗುವುದು. ಈ ತೀರ್ಮಾನದನ್ವಯ ಶ್ರೀ ರಾಮಪುರದ 318ನೇ ಬೂತಿನಲ್ಲಿ ಒಂದು ಬಾರಿ ಕಲಬೆರಕೆ ಪ್ರಕರಣ ಪತ್ತೆಯಾಗಿದ್ದು, ರೂ.2000–00 ದಂಡ ವಿಧಿಸಲಾಗಿದೆ. ಸದರಿ ಏಜೆನ್ಸಿಯವರು ಈ ದಂಡದ ಹಣವನ್ನು ಪಾವತಿ ಮಾಡದೇ ಇದ್ದು ಇದನ್ನು ಅವರ ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು. ದಿನಾಂಕ 11–1–1993ರಂದು ನಡೆದ ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ದಿನಾಂಕ 21–10–92ರಂದು ತೆಗೆದುಕೊಂಡ ತೀರ್ಮಾನವನ್ನು ಪುನರ್ ಪರಿಶೀಲಿಸಿ ಕಲಬೆರಕೆಯನ್ನು ಮೊದಲನೆ ಪ್ರಕರಣದಲ್ಲಿಯೇ ಏಜೆನ್ಸಿಯನ್ನು ರದ್ದುಪಡಿಸಲು ತೀರ್ಮಾನಿಸಲಾಗಿದೆ. ಈ ತೀರ್ಮಾನದಂತೆ ನವೆಂಬರ್ 1992ರಿಂದ ಇಲ್ಲಿಯವರೆವಿಗೆ 20 ಏಜೆನ್ಸಿಗಳನ್ನು ಕಲಬೆರಕೆ ಕಾರಣಗಳಿಂದ ರದ್ದು ಪಡಿಸಲಾಗಿದೆ. ಶ್ರೀರಾಮಪುರದ ಬೂತ್ ಸಂಖ್ಯೆ: 318ರಲ್ಲಿ ಮತ್ತೆ ಕಲಬೆರಕೆ ಪ್ರಕರಣ ಪತ್ತೆಯಾದಲ್ಲಿ ದಿನಾಂಕ 11–1–1993ರ ತೀರ್ಮಾನದನ್ವಯ ಏಜೆನ್ಸಿಯನ್ನು ರದ್ದು ಮಾಡಲಾಗುವುದು. ಸದರಿ ಬೂತಿನ ಚೆಕ್ ಬೌನ್ಸಿಂಗ್ ಪ್ರಕರಣಗಳಿಗೆ ಚೆಕ್ ಬೌನ್ಸಿಂಗ್ ಪ್ರಕರಣಗಳೂ ಸಹ ಆದಲ್ಲಿ ಏಜೆನ್ಸಿ ರದ್ದುಪಡಿಸುವ ವಿಚಾರವೂ ಸಹ ಪರಿಶೀಲನೆಯಲ್ಲಿದೆ. ದಿನಾಂಕ 11–1–1993 ರಂದು ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯ ತೀರ್ಮಾನದಂತೆ ಶ್ರೀರಾಮಪುರದ 318 ಬೂತಿನಲ್ಲಿ ಕಲಬೆರಕೆ ಪ್ರಕರಣ ಪತ್ತೆಯಾದಲ್ಲಿ ತಕ್ಷಣವೇ ಏಜೆನ್ಸಿಯನ್ನು ರದ್ದುಪಡಿಸಿ ನಿಯಮಾನುಸಾರ ಹೊಸ ಏಜೆನ್ಸಿಯನ್ನು ನೇಮಿಸಲಾಗುವುದು.

3. ಪ್ರೇರಕ–ಪ್ರೇರಕಿಯರಿಗೆ ಗೌರವ ಧನದಲ್ಲಿ ಹೆಚ್ಚಳ

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಸರ್ಕಾರವು ವಿಶ್ವಬ್ಯಾಂಕಿನ ನೆರವಿನೊಂದಿಗೆ ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ಅರಣ್ಯ ಯೋಜನೆಯೊಂದನ್ನು 1984ರಲ್ಲಿ ಸ್ಥಾಪಿಸಿ, ಆ ಯೋಜನೆಯಡಿಯಲ್ಲಿ 1500 ಮತ್ತು ಜವಾಹರ್ ರೋಜ್ಗಾರ್ ಯೋಜನೆಯಡಿಯಲ್ಲಿ 356ಕ್ಕೂ ಹೆಚ್ಚು ಪ್ರೇರಕ: ಪ್ರೇರಕಿಯರನ್ನು ಎಲ್ಲಾ ವಿಧಿವಿಧಾನಗಳ ಮೂಲಕ ನೇಮಿಸಿಕೊಂಡಿದೆ. ಆದರೆ ಅವರಿಗೆ ಸಿಕ್ಕುವ ಗೌರವಧನದಿಂದ ಇಂದಿನ ಕಾಲದಲ್ಲಿ ಜೀವನ ನಿರ್ವಹಿಸಲು ಕಷ್ಟವಾಗಿದೆ. ಏಕೆಂದರೆ ಅತ್ಯಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಅಲ್ಲದೆ ಇವರ ಹುದ್ದೆಗಳನ್ನು ಖಾಯಂ ಸಹ ಮಾಡಿರುವುದಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

† ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಹೇಳಿಕೆಯನ್ನು ನೀಡುತ್ತೇನೆ.

1. ಕರ್ನಾಟಕ ರಾಜ್ಯದಲ್ಲಿ ವಿಶ್ವಬ್ಯಾಂಕ್ ಮತ್ತು ಸಾಗರೋತ್ತರ ಅಭಿವೃದ್ಧಿ ಪ್ರಾಧಿಕಾರದ ಸಾಮಾಜಿಕ ಅರಣ್ಯ ಯೋಜನೆ 1984ರಿಂದ ಅನುಷ್ಠಾನಗೊಂಡು ಮಾರ್ಚ್ 31, 1992ಕ್ಕೆ ಮುಕ್ತಾಯಗೊಂಡಿತು. ಈ ಯೋಜನೆಯಡಿಯಲ್ಲಿ 1,468 ಜನ ಅರಣ್ಯ ಪ್ರೇರಕರು ಅಂಶಕಾಲಿಕ ಕೆಲಸಗಾರರಾಗಿ ತಿಂಗಳಿಗೆ

ನಿಗದಿತ ಗೌರವಧನ (Honararium) ಪಡೆದುಕೊಂಡು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಸಾಮಾಜಿಕ ಅರಣ್ಯ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸಾಮಾಜಿಕ ಅರಣ್ಯ ಯೋಜನೆಯ ಕೆಲಸಗಳನ್ನು 1992–93ನೇ ಸಾಲಿನಲ್ಲಿ ಮುಂದುವರೆಸಿಕೊಂಡು ಹೋಗಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ ಯೋಜನೆಯಡಿ ಮಂಜೂರಾಗಿರುವ ಸಿಬ್ಬಂದಿಯನ್ನು 1993–94ನೇ ಸಾಲಿನಲ್ಲಿಯೂ ಮುಂದುವರೆಸಲು ಇಲಾಖೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬರಬೇಕಾಗಿದೆ. 1993–94ರ ಆಯವ್ಯಯ ಅಂದಾಜಿನಲ್ಲಿ ಈ ಯೋಜನೆಗೆ 15.13 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

2. ಕರ್ನಾಟಕ ರಾಜ್ಯ ಅರಣ್ಯ ಪ್ರೇರಕರ ಸಂಘ (ರಿ)ದ ನೌಕರರು ಕಳೆದ ವರ್ಷ ಉಪವಾಸ ಸತ್ಯಾಗ್ರಹ ಮಾಡಿ ಕೆಲವು ಬೇಡಿಕೆಗಳನ್ನು ಸರ್ಕಾರಕ್ಕೆ ಒಪ್ಪಿಸಿದ್ದರು.

1992–93ನೇ ಸಾಲಿನ ಬಜೆಟ್ ಅಧಿವೇಶನದಲ್ಲಿ ಈ ಸಂಬಂಧ ಚರ್ಚೆ ನಡೆದು ಅಧಿವೇಶನದಲ್ಲಿ ಆಶ್ವಾಸನೆ ನೀಡಿದಂತೆ ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿರುವ ಅರಣ್ಯ ಪ್ರೇರಕರಿಗೆ ಗೌರವಧನವನ್ನು ಸರ್ಕಾರ ಈಗಾಗಲೇ ಮಾಸಿಕ 500 ರೂಗಳಿಗೆ 1.4.92ರಿಂದಲೇ ಅನ್ವಯಿಸುವಂತೆ ಆದೇಶ ನೀಡಿದೆ. ಜವಾಹರ ರೋಜ್‌ಗಾರ್ ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿರುವ ಪ್ರೇರಕರ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಕ್ರಮ ತೆಗೆದುಕೊಳ್ಳುತ್ತದೆ. ಪ್ರೇರಕರ ಇತರ ಬೇಡಿಕೆಗಳ ಬಗ್ಗೆ ದಿನಾಂಕ: 30–3–92ರಂದು ಅಂದಿನ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಚರ್ಚಿಸಿ ಕೆಲವು ನಿರ್ಣಯ ತೆಗೆದುಕೊಳ್ಳಲಾಗಿದ್ದು, ಇಲಾಖೆಯು ಕ್ರಮ ತೆಗೆದುಕೊಳ್ಳುತ್ತದೆ.

3. ದಿನಾಂಕ: 17–2–93ರಿಂದ ಅರಣ್ಯ ಪ್ರೇರಕರು ಮತ್ತೆ ಮುಷ್ಕರ ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈಗ ಅವರು ಈ ಕಳಗೆ ಕಾಣಿಸಿದ ಎರಡು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ.

1. ಅರಣ್ಯ ಪ್ರೇರಕರನ್ನು ಖಾಯಂಗೊಳಿಸುವುದು.
2. ಜವಾಹರ ರೋಜ್‌ಗಾರ್ ಮತ್ತು ಸಾಮಾಜಿಕ ಅರಣ್ಯ ಯೋಜನೆಗಳ ಅರಣ್ಯ ಪ್ರೇರಕರ ನಡುವೆ ಇರುವ ಆರ್ಥಿಕ ಮತ್ತು ಆಡಳಿತಾತ್ಮಕ ತಾರತಮ್ಯವನ್ನು 1–4–88ರಿಂದ ಜಾರಿಗೆ ಬರುವಂತೆ ನಿವಾರಿಸುವುದು.

4. ಅರಣ್ಯ ಪ್ರೇರಕರು ಸಾಮಾಜಿಕ ಅರಣ್ಯೀಕರಣದ ಬಗ್ಗೆ ಸಾಕಷ್ಟು ಅನುಭವವನ್ನು ಪಡೆದುಕೊಂಡಿದ್ದಾರೆ ಮತ್ತು ಕೆಲವರು ಪದವೀಧರರೂ ಇದ್ದಾರೆ. ಬಹಳಷ್ಟು ಅರಣ್ಯ ಪ್ರೇರಕರಿಗೆ ವಿಸ್ತರಣಾ ಕೆಲಸದ ಬಗ್ಗೆ ತರಬೇತಿ ಕೂಡ ಕೊಡಲಾಗಿದೆ. ಇಲಾಖೆಯಲ್ಲಿ ವನಪಾಲಕರು, ವನರಕ್ಷಕರು ಹಾಗೂ ಮಾಚೆರುಗಳ ಹುದ್ದೆಗಳನ್ನು ಭರ್ತಿ ಮಾಡುವಾಗ ಅರಣ್ಯ ಪ್ರೇರಕರಿಗೆ ಅವರ ವಿದ್ಯಾರ್ಹತೆ ಮತ್ತು ದೈಹಿಕ ಅರ್ಹತೆಗಳನ್ನು ಪರಿಗಣಿಸಿ ಸೂಕ್ತ ಹುದ್ದೆಗಳಿಗೆ ಆರಿಸಲು ಅನುಕೂಲವಾಗುವಂತೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಇಲಾಖೆಗೆ ತಿಳಿಸಲಾಗಿದೆ. ಆ ಪ್ರಸ್ತಾವನೆ ಬಂದ ಮೇಲೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕಾನೂನು ಇಲಾಖೆ, ಯೋಜನಾ ಇಲಾಖೆ ಮತ್ತು ಹಣಕಾಸು ಇಲಾಖೆಗಳೊಡನೆ ಸಮಾಲೋಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು. ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಕುಂದು ಕೊರತೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗಮನಕ್ಕೆ ತಂದು ಎರಡು ಇಲಾಖೆಗಳ ನೌಕರರಿಗೆ ಸಮಾನವಾಗಿ ಸೌಲಭ್ಯ ಪಡೆದುಕೊಳ್ಳಲು ಪ್ರಯತ್ನಿಸಲಾಗುವುದು.